MAY 2024 **U/ID 30704/ULC2A**

Time : Three hours Maximum : 75 marks

SECTION A — (10 × 2 = 20 marks)

ಕೆಳಗಿನವುಗಳಲ್ಲಿ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಉತ್ತರಿಸಿ.

ಉತ್ತರದ ಮಿತಿ 30 ಪದಗಳು.

1. 'ಬೆಳಕು' ಮೂಡುವ ಸಮಯವನ್ನು ಕವಿ ಹೇಗೆ ವರ್ಣಿಸಿದ್ದಾರೆ?

2. ಹಕ್ಕಿಗಳು ಹಾರಿ ಬಂದದ್ದು ಕವಿಗೆ ಹೇಗೆ ಕಾಣಿಸಿತು?

3. ಕುವೆಂಪು.

4. 'ಶಾರದೆ' ಎಂದು ಕವಿ ಯಾರನ್ನು ಕರೆಯುತ್ತಾರೆ?

5. ಗಂಡನ ಮನೆಯವರ ಜೊತೆ ಹೇಗೆ ನಡೆದುಕೊಳ್ಳಬೇಕೆಂದು, ಮಗಳಿಗೆ ಉಪದೇಶಿಸಲಾಗಿದೆ?

6. 'ಮಲ್ಲಿಯ ರೂಪವನ್ನು' ಕವಿ ಯಾವುದಕ್ಕೆ ಹೋಲಿಸುತ್ತಾರೆ?

7. 'ತುಂಗಭದ್ರೆ' ಯ ದೇಹ ಪ್ರಕೃತಿಯೆಂತಹುದು?

8. ಕನ್ನಡದ ಜನರನ್ನು ಕವಿ ಏಕೆ ಆಹ್ವಾನಿಸುತ್ತಿದ್ದಾರೆ?

9. 'ದೇವರು–ಪೂಜಾರಿ' ಕವನದಲ್ಲಿ ಭಕ್ತರಿಗೆ ಏನು ಕಾಣಿಸಿತು?

10. ಸೂರ್ಯಾಸ್ತವನ್ನು 'ಸಮಾಧಾನ' ಕವನದಲ್ಲಿ ಹೇಗೆ ವಿವರಿಸಲಾಗಿದೆ?

11. ಮದುವೆಯಾದ ಮೇಲೆ, ಮೊದಲ ಸಲ ತಿರುಗಾಡಲು ಹೋದಾಗ ನಿರೂಪಕರ ಹೆಂಡತಿ ಹೇಗೆ ಅಲಂಕರಿಸಿಕೊಂಡು ಬಂದಳು?

12. ಸಾವಿನ ಬಗೆಗೆ ಹೆದರಿಕೆ ಇರಬಾರದೆಂದು 'ಮಬ್ಬಿನಿಂದ ಮಬ್ಬಿಗೆ' ಕವನದಲ್ಲಿ ಕವಿ ಏಕೆ ಹೇಳುತ್ತಾರೆ?

SECTION B — ($5 \times 5 = 25$ marks)

ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ.

ಉತ್ತರದ ಮಿತಿ 200 ಪದಗಳು.

13. ಅಂಗುಲ ಹುಳು ಹೇಗೆ ಚಲಿಸುತ್ತಿತ್ತು? ಅದರ ರೂಪ ಹೇಗಿತ್ತು?

14. 'ಮಲೆ ದೇವರ' ಸಂಕಟವನ್ನು ನೆನೆದು ನಾಗಿ ಕಣ್ಣೀರಿಟ್ಟ ಚಿತ್ರಣ.

15. ಯೌವ್ವನದ ಉತ್ಸಾಹವನ್ನು 'ಮಬ್ಬಿನಿಂದ ಮಬ್ಬಿಗೆ' ಕವನದಲ್ಲಿ ಹೇಗೆ ವಿವರಿಸಲಾಗಿದೆ?

16. 'ಎಲ್ರಂಗೆ ಮನ್ಸ – ಇವನೇನೋ ಒಸಿ ತಪ್ಪಾಂತ ಅನ್ನಲ್ಲ' — ಸಂದರ್ಭದೊಂದಿಗೆ ವಿವರಿಸಿ.

17. 'ಕಂಬನಿ ಕುಡಿಯುವ ಹುಂಬ ಬಾಯಿಲೆ ಮೈದುಂಬಿದಂತೆ ಉಧೋ! ಉಧೋ!' ಎನ್ನುತಲಿತ್ತೋ!' — ಸಂದರ್ಭ ಸಹಿತ ಉತ್ತರಿಸಿ.

18. 'ತುಂಗಭದ್ರೆಯ ಹಡಗು ಚಂದಿರನ ಹೊತ್ತು ಓಡಾಡುವುದು' — ಎಂದು ಕವಿ ಹೇಳಲು ಕಾರಣವೇನು?

19. 'ಗಿಡಗಂಟೀಯಾ ಕೊರಳೊಳಗಿಂದಾ ಹಕ್ಕಿಗಳಾ ಹಾಡು' — ಸಂದರ್ಭದೊಂದಿಗೆ ವಿವರಿಸಿ.

SECTION C — ($3 \times 10 = 30$ marks)

ಕೆಳಗಿನವುಗಳಲ್ಲಿ ಒಟ್ಟು ಮೂರು ಪ್ರಶ್ನೆಗಳಿಗೆ ಉತ್ತರಿಸಿ.

24ನೇ ಪ್ರಶ್ನೆ ಕಡ್ಡಾಯ.

20. ಕನ್ನಡ ನಾಡಿನ ರಥವನ್ನು ಹೇಗೆ ಎಳೆಯಬೇಕೆಂದು ಕವಿಯು ಕನ್ನಡ ಜನರಿಗೆ ಕರೆ ನೀಡಿದ್ದಾರೆ?

21. 'ದೇವರು–ಪೂಜಾರಿ' ಕವನದಲ್ಲಿ ಪೂಜಾರಿಯು ದೇವರನ್ನು ಮರೆ ಮಾಡಿ, ತಾನು ಮಿಂಚುತ್ತಿರುವುದನ್ನು ಕವಿ ಹೇಗೆ ಮನವರಿಕೆ ಮಾಡಿಕೊಟ್ಟಿದ್ದಾರೆ?

22. 'ಪ್ರಗತಿಪರ ಮನೋಭಾವ ಮತ್ತು ಸಾಂಪ್ರದಾಯಿಕತೆಯ ಮುಖಾಮುಖಿಯನ್ನು "ಅಮ್ಮ, ಆಚಾರ, ನಾನು" ಕವನದಲ್ಲಿ ಕಾಣಬಹುದು' — ಚರ್ಚಿಸಿ.

23. ಅತಿಥಿಗಳು ಕವನದ ಆಶಯವನ್ನು ನಿರೂಪಿಸಿ.

24. ಕೆಳಗಿನವುಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಪ್ರಬಂಧ ಬರೆಯಿರಿ.

(ಅ) ನಮ್ಮ ಊರಿನ ವಿಶೇಷತೆ

(ಆ) ಚಲನಚಿತ್ರಗಳು

(ಇ) ದೀಪಾವಳಿ ಹಬ್ಬ.